


# ಕಮ್ಮಿತ್ತುನಾಡು

ಸಂಪುಟ: 03

ಸಂಪಾದಕರು

ಡಾ. ಮಂಜುನಾಥ ಎಸ್. ಪಾಟೀಲ

ಡಾ. ಆದಿತ್ಯ

K.E. BOARD'S FIRST GRADE ARTS & COMMERCE COLLEGE ★ DHARWAD-6 COLLEGE CODE: 1218



PRINCIPAL
K. E. Board's
First Grade Arts & Commerce College
Shivaji Circle, Savadatti Road, Dharwad-6

ಕಮ್ಮಿತ್ತನಾಡು – (ಸಂಪುಟ–೦೩) ಇತಿಹಾಸ ಮತ್ತು ಸಂಸ್ಕೃತಿಗೆ
ಸಂಬಂಧಿಸಿದ ಸಂಶೋಧನ ಲೇಖನಗಳ ಸಂಗ್ರಹ

**KAMMITTUNADU - (Volume-03) A Collection of Research Articles Related to History and Culture**

Written By :
**Dr. Manjunath S. patil**
**Dr. Aditya**

Published by:
**Chetan Kanabur**
**Chetan Books**
# 624, 9th D Main Road, Hampinagara,
Bengaluru-560104
Mob: 99861 67684

First Impression: 2020
Pages: 194
Book Size : 1/8 Demi
Price : Rs. 150/-
ISBN-978-81-941722-7-7
© Author
Paper Used : 70 GSM Maplitho
Copies: [illegible]
DTP: Chetan
Cover Design : Chetan
Print at:

AM

This book is protected by copyright laws. No part of this book is to be reproduced, transmitted, utilized or stored in any form or by any means now known or hereinafter invented, electronic, digital or mechanical, including photocopying, scanning, recording or by any information storage or retrieval system, without prior written permission from the author or publisher.

K. E. BOARD'S FIRST GRADE ARTS & COMMERCE COLLEGE ★ DHARWAD-6 COLLEGE CODE: 1218

## ಸಲಹಾ ಮಂಡಳಿ

**ಡಾ. ಕೆ.ಪಿ. ಈರಣ್ಣ**
ವಿಶ್ರಾಂತ ಪ್ರಾಧ್ಯಾಪಕರು
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

**ಡಾ. ವಾಸುದೇವ ಬಡಿಗೇರ**
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಗಂಗಾಧರ ದೈವಜ್ಞ**
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಕೆ. ಚೆನ್ನಬಸಪ್ಪ**
ವಿಶ್ರಾಂತ ಪ್ರಾಧ್ಯಾಪಕರು
ಬಿ.ಎಲ್.ಡಿ.ಇ. ಶಿಕ್ಷಣ ಸಂಸ್ಥೆ
ಜಮಖಂಡಿ

**ಡಾ. ಎಸ್. ನಾಗರಾಜಪ್ಪ**
ಸಹಾಯಕ ಅಧೀಕ್ಷಕ ಶಾಸನ ತಜ್ಞರು
ಎ.ಎಸ್.ಐ, ಮೈಸೂರು

**ಶ್ರೀ. ನೆಲ್ಕುದ್ರಿ ಸದಾನಂದಪ್ಪ**
ಸಹಾಯಕ ನಿರ್ದೇಶಕರು
ರಾಜ್ಯ ಪತ್ರಾಗಾರ ಇಲಾಖೆ
ವಿಕಾಸಸೌದ, ಬೆಂಗಳೂರು

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6

# ಪರಿವಿಡಿ

ಮುನ್ನುಡಿ

ಸಂಪಾದಕರ ಮಾತು

೧. ಸಂಡೂರು ಕಾರ್ತಿಕೇಯ ಮತ್ತು ವಡ್ಡಾರಾಧನೆಯ ಕಾರ್ತಿಕ ಋಷಿ —೧೧

ಡಾ. ವಾಸುದೇವ ಬಡಿಗೇರ

೨. ಸಪ್ತ ಮಾತೃಕೆಯರು —೨೫

ಡಾ ಕಲವೀರ ಮನ್ವಾಚಾರ

೩. ಮೈಲಾಪುರದ ಮೈಲಾರ —೫೩

ಡಾ. ರಮೇಶ ನಾಯಕ

೪. ಮುದನೂರಿನ ಪ್ರಾಚೀನ ಮೂರ್ತಿಶಿಲ್ಪಕಲೆ —೫೫

ಡಾ. ಎಸ್.ವೈ. ಸೋಮಶೇಖರ್

೫. ಜಮಖಂಡಿ ತಾಲೂಕಿನ ವೀರಗಲ್ಲುಗಳು —೭೫

ಡಾ. ಮಂಜುನಾಥ ಎಸ್. ಪಾಟೀಲ

೬. ಕೋಳಿವಾಡದಲ್ಲಿ ದೊರೆತ ಅಪ್ರಕಟಿತ ಶಾಸನ —೯೦

ಡಾ. ಸುರೇಶ ಹಾನಗಲ್ಲ

೭ ತಮಿಳುನಾಡಿನ ಅಪ್ರಕಟಿತ ಹುಲಿಬೇಟೆ ವೀರಗಲ್ಲು ಶಾಸನ—೯೪

ಡಾ. ಎಸ್. ನಾಗರಾಜಪ್ಪ

೮. ಹಂಪಿ ಪರಿಸರದ ಪೌರಾಣಿಕ ಸ್ಥಳಗಳು —೯೭

ಶ್ರೀಮತಿ ಶಾಂತದೇವಿ ಸಿ.

K. E. BOARD'S FIRST GRADE ARTS & COMMERCE COLLEGE DHARWAD-6 COLLEGE CODE: 1218

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6

೬

## ಕೋಳಿವಾಡದಲ್ಲಿ ದೊರೆತ ಅಪ್ರಕಟಿತ ಶಾಸನ

ಡಾ. ಸುರೇಶ ಹಾನಗಲ್ಲ

ಹುಬ್ಬಳ್ಳಿ ತಾಲೂಕಿನ ಕೋಳಿವಾಡ ಗ್ರಾಮವು, ಹುಬ್ಬಳ್ಳಿಯಿಂದ ೨೯ ಕಿ.ಮೀ ಅಂತರದಲ್ಲಿದೆ ಈ ಪ್ರದೇಶವು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಯಾದವ, ವಿಜಯನಗರದಂತಹ ಅನೇಕ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು. ಪ್ರಸ್ತುತ ಈ ಪ್ರದೇಶದಲ್ಲಿ ಈಗಾಗಲೇ ಏಳು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಅತ್ಯಂತ ಪ್ರಾಚೀನ ಶಾಸನ ಕ್ರಿ.ಶ. ೯ನೆಯ ಶತಮಾನಕ್ಕೆ ಸೇರಿದ ರಾಷ್ಟ್ರಕೂಟ ಖೊಟ್ಟಿಗನ ಶಾಸನ. ಇದು ಈ ಗ್ರಾಮವನ್ನು "ಕೋಳಿವಾಡ" ಎಂದು ಉಲ್ಲೇಖಿಸುತ್ತದೆ. ಈ ಪ್ರದೇಶವು ಸರ್ವಧರ್ಮಗಳ ಸಮನ್ವಯ ಕೇಂದ್ರವಾಗಿದ್ದು ಇಲ್ಲಿ ಜೈನ, ಬೌದ್ಧ, ಶೈವ, ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಅನೇಕ ಕುರುಹುಗಳು ಕಂಡು ಬರುತ್ತವೆ. ಮುಖ್ಯವಾಗಿ ಬೌದ್ಧಧರ್ಮಕ್ಕೆ ಸಂಬಂಧಿಸಿದ ತಾರಾಭಗವತಿ ವಿಗ್ರಹ ಇಲ್ಲಿ ಕಂಡು ಬರುತ್ತಿದ್ದು ಅದರ ಪಾದಪೀಠದಲ್ಲಿ ನಾಗರೀಲಿಪಿಯ ಶಾಸನವಿದೆ. ಅಲ್ಲದೇ ಶಾಸನೋಕ್ತ ವೈಷ್ಣವ ದೇವಾಲಯ, ಎರಡು ಸಪ್ತಮಾತೃಕೆ ಶಿಲ್ಪ ಪಟ್ಟಿಕೆಗಳು, ಮಹಿಷಾಸುರಮರ್ಧಿನಿ, ಗಜಲಕ್ಷ್ಮಿ, ಒಂದು ತುರುಗೋಳ್ ವೀರಗಲ್ಲು ಶಿಲ್ಪಗಳು ಕಂಡುಬರುತ್ತಿದ್ದು ಇವು ಗ್ರಾಮದ ಪ್ರಾಚೀನತೆಗೆ ಸಾಕ್ಷೀಯಾಗಿವೆ.

ಈ ಪ್ರದೇಶದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡ ಸಂದರ್ಭದಲ್ಲಿ ಉಮಾಮಹೇಶ್ವರಿ ಮೂರ್ತಿಯ ಹಿಂಭಾಗದಲ್ಲಿ ಶಾಸನವಿದ್ದದ್ದು ಕಂಡುಬಂದಿತು. ಈ ಕುರಿತಾಗಿ ಅಧ್ಯಯನ ಮಾಡಿದಾಗ ಇದೊಂದು ಅಪ್ರಕಟಿತ ಶಾಸನವೆಂದು ತಿಳಿದು ಬಂದಿತು. ಪ್ರಸ್ತುತ ಈ ಶಾಸನವನ್ನು ಓದಿ ಅದರ ಸಾರಾಂಶವನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ. ಸ್ಥಳೀಯರು ಈ ಮೂರ್ತಿಯನ್ನು ಉಮಾಮಹೇಶ್ವರ ಎಂದು ಕರೆಯುತ್ತಾರೆ. ಆದರೆ ಪ್ರತಿಮಾಲಕ್ಷಣಗಳ ದೃಷ್ಟಿಯಿಂದ ನೋಡಿದಲ್ಲಿ ಈ ಮೂರ್ತಿಯ ಕೈಯಲ್ಲಿ ಖಡ್ಗ, ತ್ರಿಶೂಲ, ಡಮರು ಮತ್ತು ಪಾನಪಾತ್ರೆಯ ಕಂಡುಬರುತ್ತದೆ. ಪ್ರಾಯಶಃ ಈ ಮೂರ್ತಿಯು ಭೈರವ ಮತ್ತು ಭೈರವಿಯ ವಿಗ್ರಹ ವಿದ್ದಂತೆ ಕಾಣುತ್ತದೆ.

ಮೂಲತಃ ಶಾಸನ ಹಾಕಿಸುವುದಕ್ಕಾಗಿ ತಯಾರಿಸಿದ ಫಲಕವಾಗಿದ್ದು, ನಂತರ ಕಾಲದಲ್ಲಿ ಉಮಾಮಹೇಶ್ವರ ಮೂರ್ತಿಯನ್ನಾಗಿ ಪರಿವರ್ತಿಸಲಾಗಿದೆ.



ಈ ಮೂರ್ತಿಯ ಕಾಲ ೧೬-೧೭ನೆಯ ಶತಮಾನಕ್ಕೆ ಸೇರಿದೆ. ಆದರೆ ಹಿಂಭಾಗದಲ್ಲಿರುವ ಶಾಸನ ಕ್ರಿ.ಶ. ೧೧ನೆಯ ಶತಮಾನದ ಕಾಲಘಟ್ಟದ ಕನ್ನಡ ಲಿಪಿಯನ್ನು ಹೊಂದಿದೆ. ಆರಂಭದಲ್ಲಿ ತೃಟಿತವಾಗಿರುವ ಈ ಶಾಸನವು ಸುಮಾರು ೨೪ ಸಾಲುಗಳನ್ನು ಒಳಗೊಂಡಿದೆ. ಅವುಗಳಲ್ಲಿ ೧-೮ ಸಾಲುಗಳು ಎರಡು ಪಾರ್ಶ್ವಗಳ ಭಾಗಗಳು ನಷ್ಟವಾಗಿದೆ. ೧೧ ರಿಂದ ಮುಂದಿನ ಭಾಗದ ಬಲ ಮತ್ತು ಎಡ ಪಾರ್ಶ್ವಗಳಲ್ಲಿ ಕಲ್ಲನ್ನು ಕೆತ್ತಿ ತೆಗೆಯಲಾಗಿದೆ. ಹಾಗಾಗಿ ಶಾಸನದ ಪೂರ್ತಿಪಾಠ ಲಭ್ಯವಾಗಿರುವುದಿಲ್ಲ.

**ಶಾಸನದ ಪಠ್ಯ**

೧. ...........

೨. ........ಬ್ರಾತಿಶರಶಿಷ್ಯ......

೩. ಭಂಜನರುಂ ಸಕಂಕಳಾಗಮ ಪ್ರವೀಣ ರೆನಿಪ್ಪ.......

೪. .......ತಮ್ಮಮಾನ್ಯದೊಳಗೆ ಸರ್ವಬಾಧಾಪರಿವಾರ ಮಾಗೆ......

೫. ........ಕಂ ದೇವರಂ ಪೂಜಿಸುವ ಪೂಜಾರಿಗಂ ಮಠದ
ವಿದ್ಯಾತ್ಥೀರ್ಥಪೋಧನರ....[ಗ್ರಾ]

೬. .......ಜೀರಗೆ......ಮೂಡಲು......ಮತ್ತರ್ವ್ವಸೊಗೆಯ ಬಟ್ಟೆಯಂ....
ಪಡುವಲು....ಪಳ್ಳದ ಬಟ್ಟೆ....

೭. ......ಬಿಟ್ಟ ಕೆಯಿ ಮತ್ತರ್ಪ್ಪನ್ನೆರಡು ದೇವರ ನನ್ದಾದೀವಿಗೆಗೆ...
ಎಣ್ಣೆಗೆಗಾಣಮೊನ್ನುದಣ್ಣಾನಾಯಕನಂಗೊ[ಟ್ಟ]

೮. ......ದೆಂಮರ ದಣ್ಣನಾಯಕಂ ಬಣ್ಣದೇವ ಏಸಗದಂಡನಾಯಕಂ
ನಾಗವರ್ಮಯ್ಯಗಳ್ಗಂಬೆಸಸಲವರ್ಬ್ಬನ್ನು

೯. ಕರೆಯ ಚತುಸ್ಸೀಮೆಗೆ ನಾಲ್ಕುಲಿಂಗದ ಕಲ್ಗಳಂ ತನ್ನು
ಚಂದ್ರಾರ್ಕ್ಕತಾರಬರಂ ನಿಲಿಸಿದರ್@ಶ್ರೀಮದಿನ್ನೂರ್ವ್ವರಿತಮ್ಮ

೧೦. .....ಗೆಯಿದ ರಿಮಾರಕಬ್ಬೆಯ ಕೆಯ್ಯಿಂಬಡಗಲು ಮೇರೆಯ
ಪೊಲದಲ್ಯ[?] .......ಮತ್ತರಾರು ದೇವರ ನನ್ದಾದೀವಿ

೧೧. ವೇದ್ಯಕೆ ಮಠದ ವಿದ್ಯಾರ್ತ್ಥೀತಪೋಧನರ ಗ್ರಾಸಕೆನ್ನು
ಸರ್ವ್ವಬಾಧಾಪರಿಹಾರ.....ಬಿಟ್ಟ ....ಮತ್ತರಾರು ದೇವರ ನನ್ದಾದೀವಿ

೧೨. ...ಗ್ಗಾಣಮೊನ್ನು@ ಚನ್ದಿಮಯ್ಯನಾಯಕತ್ತರ್ಮ್ಮ ಆ....ಗೆ
ಉಗ್ಗ್ರಾಲಕ್ಷ್ಮಿ

೧೩. ತ್ತಗೆಯೊಳು ಮೊದಲಿಕೆಯಿ ಮತ್ತರಾರು ಅನ್ತುಮತ್ತರ್ಪ್ಪ....ದ್ರವನಾಗಲಿ

೧೪. ಈ ಧರ್ಮಮನಾ ಕವಿಲೆಯ ಕೋಡುಂ

K. E. BOARD'S FIRST GRADE ARTS & COMMERCE COLLEGE DHARWAD-8 COLLEGE CODE: 1218
PRINCIPAL
K. E. Board's
First Grade Arts & Commerce College
...Circle, Savadatti Road, Dharwad-8

೧೫. ಣಾಸಿಪ್ರಯಾ ಕೃಮಿಹಿಧರ್ಮಮದಳಿ
೧೬. ಕೊಳಗಮಂಪಾ ಬ್ರಾ
೧೭. ಮನೆಳಿ
೧೮. ತಪ್ಪದು ಕಾದನ
೧೯. @ನವದಿಂದ
೨೦. ಗೇನ್ನು ಪೆನ್ನರ ಸ್ಥಿರಮನೆ ಮೂರು
೨೧. ಗಗೊಂ

**ಸಾರಾಂಶ**

ತೃಟಿತವಾಗಿರುವ ಈ ಶಾಸನದಲ್ಲಿ ಯಾವುದೋ ಒಂದು ಶಿವದೇವಾಲಯಕ್ಕೆ (ಶಾಸನ ತೃಟಿತ ವಾಗಿರುವುದರಿಂದ ದೇವಾಲಯದ ಹೆಸರು ತಿಳಿದು ಬರುವುದಿಲ್ಲ.) ದಾನಕೊಟ್ಟ ಉಲ್ಲೇಖವಿದೆ. ಲಭ್ಯವಿರುವ ಭಾಗದ ಆರಂಭದಲ್ಲಿ 'ಸಕಳಕಳಾಗಸೆರಿಪ್ಪ' ಎಂಬ ಉಲ್ಲೇಖ ಹಾಗೂ ೯ನೆಯ ಸಾಲಿನಲ್ಲಿ 'ಶ್ರೀಇನ್ನೂರ್ವ್ವರ' ಪ್ರಸ್ತಾಪ ಬಂದಿರುವದರಿಂದ ಕೋಳಿವಾಡದ ಇನ್ನೂರು ಮಹಾಜನರನ್ನು ಉಲ್ಲೇಖಿಸಲಾಗಿದೆ ಎಂದು ಅಭಿಪ್ರಾಯಿಸಲಾಗಿದೆ. ಕೋಳಿವಾಡದ ಇನ್ನೂರು ಮಹಾಜನರ ಉಲ್ಲೇಖ ಇದೇ ಗ್ರಾಮದ ಇತರೆ ಶಾಸನಗಳಲ್ಲಿ ಕೂಡಾ ಕಾಣುತ್ತೇವೆ. ದೇವರನ್ನು ಪೂಜಿಸುವ ಪೂಜಾರಿಗೆ, ಮಠದ ವಿದ್ಯಾರ್ಥಿಗಳಿಗೆ ಮತ್ತು ತಪೋಧನರಿಗೆ ಆಹಾರ ಒದಗಿಸುವದಕ್ಕಾಗಿ ೧೨ ಮತ್ತರು ಭೂಮಿಯನ್ನು ಬಿಡಲಾಗಿದೆ. ಇದರ ಮೇರೆಗಳ ವಿವರಗಳು ನಷ್ಟವಾಗಿವೆ. ಹಾಗೆಯೇ ದೇವರ ನಂನ್ದಾದೀವಿಗೆಗೆ ಎಣ್ಣೆ ಒದಗಿಸುವುದಕ್ಕಾಗಿ ಒಂದು ಗಾಣವನ್ನು ಬಿಡಲಾಗಿದೆ. ದಂಡನಾಯಕ ಬಣ್ಣದೇವ ಮತ್ತು ಎಸಗದಂಡನಾಯಕ ಇವರು ನಾಗಮ್ಮಯ್ಯಗಳಿಗೆ ವಿಜ್ಞಾಪಿಸಲು ಅವರು ಬಂದು ನೀಡಲಾದ ಭೂಮಿಯ ಚತುಸ್ಸೀಮೆಗೆ ನಾಲ್ಕುಲಿಂಗದ ಕಲ್ಲುಗಳನ್ನು ತಂದು ನಿಲ್ಲಿಸಿದರು. ಕೋಳಿವಾಡದ ಇನ್ನೂರ್ವ್ವಕೂಡಾ ದೇವರ ಗಂಧ, ಧೂಪ, ನೈವೇದ್ಯಕ್ಕೆ ಹಾಗೂ ಮಠದ ವಿದ್ಯಾರ್ಥಿತಪೋಧನರ ಆಹಾರಕ್ಕೆಂದು ಸರ್ವ್ವಬಾದಾಪರಿಹಾರವಾಗಿ ಆರು ಮತ್ತರು ಭೂಮಿಯನ್ನು ದಾನವಾಗಿ ಬಿಟ್ಟ ಉಲ್ಲೇಖವಿದೆ. ಹಾಗೆಯೇ ದೇವರ ನಂನ್ದಾದೀವಿಗೆಗೆ ಒಂದು ಗಾಣವನ್ನು ಬಿಡಲಾಗಿದೆ. ಚಂದಿಮಯ್ಯನಾಯಕನೂ ಕೂಡಾ ಪ್ರಾಯಶಃ ಹನ್ನೆರಡು ಮತ್ತರು ಭೂಮಿಯನ್ನು ದಾನ ಮಾಡಿದ್ದಾನೆ. ಇದಾದ ಮೇಲೆ ಕನ್ನಡ ಮತ್ತು ಸಂಸ್ಕೃತದಲ್ಲಿ ಫಲಶ್ರುತಿಯ ವಿವರಗಳಿವೆ.



K. E. BOARD'S FIRST GRADE ARTS & COMMERCE COLLEGE DHARWAD-6 COLLEGE CODE: 1218

ಪ್ರಸ್ತುತ ಈ ಗ್ರಾಮದಲ್ಲಿ ಎರಡು ದಾನ ಶಾಸನಗಳು ಕಂಡು ಬರುತ್ತವೆ, ಇವು ಧಾರ್ಮಿಕ ದತ್ತಿಯನ್ನು ಉದ್ದೇಶಿಸುವುದರ ಜೊತೆಗೆ ಖಾಸಗಿ ವ್ಯಕ್ತಿಗಳಿಗೆ ನೀಡಿದ ದಾನಗಳನ್ನು ದಾಖಲಿಸುತ್ತವೆ. ಉದಾ; ದೇವಾಲಯದಲ್ಲಿ ನಡೆಯುವ ಪೂಜೆ-ಪುನಸ್ಕಾರಗಳಿಗೆ, ಪೂಜಾರಿಗಳಿಗೆ, ವಾದ್ಯಗಾರರಿಗೆ, ನರ್ತಕಿಯರಿಗೆ, ಮಠದಲ್ಲಿ ನಡೆಯುವ ವಿದ್ಯಾದಾನಕ್ಕೂ ಹಾಗೂ ಅಧ್ಯಾಪಕ ಮತ್ತು ವಿದ್ಯಾರ್ಥಿಗಳಿಗೆ ಹೀಗೆ ಹಲವರಿಗೆ ದಾನ ಬಿಟ್ಟಿರುವುದನ್ನು ಕಾಣುತ್ತೇವೆ. ಪ್ರಸ್ತುತ ಈ ಪರಿಸರದಲ್ಲಿನ ಚಾವಡಿ ಹತ್ತಿರ ಕ್ರಿ.ಶ. ೧೪೫೫ರ ಶಾಸನದ ವಿಷಯ ಅಸ್ಪಷ್ಟವಾಗಿದ್ದು, ಮಹಾದೇವರಿಗೆ ದತ್ತಿ ಎಂಬ ವಿಷಯವನ್ನು ಮಾತ್ರ ಶಾಸನದಲ್ಲಿ ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಹಾಗೆಯೇ ಇನ್ನೊಂದು ಶಾಸನದಲ್ಲಿ ಅಗಸ್ತ್ಯಗೋತ್ರದ ಅಗ್ರಹಾರದ ಯಜಮಾನ ಆನೆಯದೇವಪಯ್ಯಗಳ ಮಗ ಸೂರಪಯ್ಯನು ಶ್ರೀವಾಧನಜನಾರ್ಧನಸ್ವಾಮಿಯ ಗುಡಿಗೆ ತಿರುವಲಭೋವನ ಮಗಳು ಸೂರಿ ಮಾಣಿಕೆ ಎಂಬ ಹೆಣ್ಣನ್ನು ಕಾಣಬೆಯ ಪಾತ್ರವಾಗಿ ಅವಳ ಜೀವಿತ ವರ್ಷಕ್ಕೆ ಆರುಘಟ್ಟಿ ವರಹವನ್ನು ವಿವಿಧ ಕ್ಷೇತ್ರಗಳ ಹಸಿಗೆಯಲ್ಲಿ ಮೇಟಿಗೆ ವೊಂಮನದ ಕಟ್ಟಳೆಯಲ್ಲಿ ಬಿಟ್ಟಿರುವ ವಿಷಯವನ್ನು ತಿಳಿಸುತ್ತದೆ. ಅಂದಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿಸಿ ಕೊಡುವಲ್ಲಿ ಈ ಗ್ರಾಮದಲ್ಲಿ ಕಂಡುಬರುವ ಶಾಸನಗಳು ಸಹಾಯಕಾರಿಯಾಗಿವೆ. ಹೀಗೆ ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಹೊಂದಿರುವ ಕೋಳಿವಾಡ ಪ್ರದೇಶದಲ್ಲಿ ಇನ್ನೂ ಎರಡು ಅಪ್ರಕಟಿತ ಶಾಸನಗಳಿದ್ದು, ಅವುಗಳು ಬಹಳ ಅಪರೂಪವಾದವುಗಳಾಗಿವೆ.

(ಈ ಶಾಸನವನ್ನು ಓದಿ ಅರ್ಥೈಯಿಸಿದ ನನ್ನ ಪೂಜ್ಯ ಗುರುಗಳಾದ ಡಾ. ಶ್ರೀನಿವಾಸ ಪಾಡಿಗಾರ ಮತ್ತು ಮಾರ್ಗದರ್ಶಕರಾದ ಡಾ. ಕೆ.ಜಿ. ಭಟ್ಟಸೂರಿ ಅವರುಗಳಿಗೆ ಕೃತಜ್ಞತೆಗಳು, ಸ್ನೇಹಿತರಾದ ಡಾ. ಸಂಜಯ ಎನ್. ಹಂಚೆ ಹಾಗೆಯೇ ಸ್ಥಳೀಯರಾದ ಸೋಮಶೇಖರ ನಿಂ. ಪೆಂಡೇರ, ಷಣ್ಮುಖಪ್ಪ ಮಾ.ಗುಂಜಾಳ ಇತರರಿಗೆ ಕೃತಜ್ಞತೆಗಳು)

**ಆಕರ ಗ್ರಂಥಗಳು**

೧. ಕ.ಐ. ಸಂ. ೫
೨. ಕಲಬುರ್ಗಿ ಎಂ.ಎಂ. (ಸಂ), ಧಾರವಾಡ ಜಿಲ್ಲೆಯ ಶಾಸನಸೂಚಿ, ೧೯೯೬
೩. ಹನುಮಾಕ್ಷಿ ಗೂಗಿ(ಸಂ), ಹುಬ್ಬಳ್ಳಿ ತಾಲೂಕಿನ ಶಾಸನಗಳು, ೨೦೧೩

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-8

K. E. BOARD'S FIRST GRADE ARTS & COMMERCE COLLEGE
DHARWAD-6
COLLEGE CODE: 1218





ಚರಿತ್ರೆ ವಿಷಯವನ್ನು ಅಧ್ಯಯನ ಮತ್ತು ಸಂಶೋಧನೆ ಮಾಡುವಾಗ ಹಲವು ಕ್ಷೇತ್ರಗಳನ್ನು ಅಲಕ್ಷಿಸುತ್ತಾ ಬಂದಿರುವುದು ಸ್ಪಷ್ಟ. ಈ ನಿಟ್ಟಿನಲ್ಲಿ ಇಂದು ಇಂತಹ ಅಲಕ್ಷಿತ ಕ್ಷೇತ್ರಗಳ ಅಧ್ಯಯನಗಳು ವಿಫುಲವಾಗಿ ನಡೆಯುತ್ತಿರುವುದು ಗಮನಾರ್ಹ ಸಂಗತಿ. ಹಾಗಾಗಿ ಕರ್ನಾಟಕದ ಸಾಹಿತ್ಯ, ಸಂಸ್ಕೃತಿ, ಶಾಸನ, ದೇವಾಲಯ, ಕೋಟೆಕೊತ್ತಲು, ಶಿಲ್ಪಗಳು ಹಾಗೂ ಸ್ಥಳೀಯ ಮತ್ತು ಮೌಖಿಕ ಚರಿತ್ರೆಯಲ್ಲಿ ನಾಡು-ನುಡಿಯ ಸಂಸ್ಕೃತಿಗೆ ಸಂಬಂಧಿಸಿದಂತೆ ನಡೆದಿರುವ ಸಂಶೋಧನಾ ಲೇಖನಗಳನ್ನು ಒಟ್ಟುಗೂಡಿಸಿ ಚರಿತ್ರೆಯ ಸಮಗ್ರತೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಈ ಸಂಪುಟದ ಮೂಲಕ ಮಾಡಲಾಗಿದೆ. ನಮ್ಮ ಈ ಸಂಪುಟ ಓದುಗರ ಜೇಬಿಗೆ ಭಾರವೆನಿಸುವಂಥದಲ್ಲ. ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಲೇಖನಗಳ ಸಂಗ್ರಹ ಸಂಪುಟವನ್ನು ಸಹೃದಯರಿಗೆ ಕೊಡಬೇಕೆನ್ನುವ ಆಶಯದೊಂದಿಗೆ ನಮ್ಮ ಈ [redacted] ಸಂಪಾದಕ ಕೃತಿಯನ್ನು ಪ್ರಕಟಿಸಲಾಗಿದೆ.

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-8

ISBN 819417227-6

ಸ್ಥಾಪನೆ: 2003 ✆ : 2747813

ಕೆ. ಇ. ಬೋರ್ಡಿನ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ

ಶಿವಾಜಿ ಸರ್ಕಲ್, ಸವದತ್ತಿ ರಸ್ತೆ, ಧಾರವಾಡ-6

K. E. Board's First Grade Arts and Commerce College

Shivaji Circle, Savadatti Road, Dharwad-6

*(College Code No-1218)*

## Unpublished Inscription found in Koliwad (Hubli Taluk)

**Article by Dr. Suresh Hangalla.**

Koliwad is 29 kmts a way from Hubli. Koliwad Came under the rule of Rastrakoota,Chalukky,Yadav and Vijanagar. We have got 7 inscription already and oldest the dates back to 9th century. Here in this inscription the name of KOLIWAD is clearly mentioned. Koliwad was land of all religions. The statue of "TARA BHAGAVATI" of Buddhism is found here.

K. E. BOARD'S FIRST GRADE ARTS & COMMERCE COLLEGE ★
DHARWAD-6
COLLEGE
CODE: 1218

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6